**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು:- ಶ್ರೀ ಎಂ ಜಿ ಆರ್ ವಕೀಲರಿಂದ 1 ರಿಂದ 3 ನೇ ಪ್ರತಿವಾದಿಯ ಪರವಾಗಿ.**

5. ನನ್ನ ಜನ್ಮ ದಿನಾಂಕ ಗೊತ್ತಿರುವುದಿಲ್ಲ. ಯಾವ ವರ್ಷ ನನ್ನ ಜನನ ಆಗಿರುತ್ತದೆ ಎಂದು ಗೊತ್ತಿಲ್ಲ. ಆಧಾರ್ ಕಾರ್ಡ್ ನೋಡಿ ನನ್ನ ವಯಸ್ಸನ್ನು ಹೇಳಿರುತ್ತೇನೆ. ನನ್ನ ಜನ್ಮ ದಿನಾಂಕವನ್ನು ಆಧಾರ್ ಕಾರ್ಡ್ ನಲ್ಲಿ ನಮೂದಿಸಲಾಗಿದೆ. ವಾದಿ ತಾವು ಕಮಲಮ್ಮ ನ ಮಗಳು ಇರುತ್ತಾರೆ ಎಂದು ದಾವೆ ಹೂಡಿರುತ್ತಾರೆ. ನನಗೆ ವಾದಿ ಬಹಳ ವರ್ಷಗಳಿಂದ ಪರಿಚಯ ಇರುತ್ತಾರೆ. ಈಗ ವಾದಿ ಬೆಂಗಳೂರಿನಲ್ಲಿ ವಾಸಿಸುತ್ತಾರೆ ಮೊದಲು ಚಿಕ್ಕಬೆನ್ನೂರಿನಲ್ಲಿ ಇದ್ದರು. ನಾನು ಕರಿಯಪ್ಪ ಮತ್ತು ವೆಂಕಟಮ್ಮ ನನ್ನು ನೋಡಿರುತ್ತೇನೆ. ಅವರ ಮದುವೆ ಯಾವಾಗ ಆಗಿರುತ್ತದೆ ಎಂದು ಗೊತ್ತಿಲ್ಲ. ಸುಮಾರು 7-8 ವರ್ಷಗಳ ಹಿಂದೆ ಕರಿಯಪ್ಪ ಮತ್ತು ವೆಂಕಟಮ್ಮ ತೀರಿಕೊಂಡಿರುತ್ತಾರೆ ನಿಖರವಾದಿ ದಿನಾಂಕ ಗೊತ್ತಿಲ್ಲ. ಮೊದಲು ವೆಂಕಟಮ್ಮ ತೀರಿಕೊಂಡಿರುತ್ತಾರೆ. ಎಷ್ಟು ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ ಎಂದು ಗೊತ್ತಿಲ್ಲ. ಕರಿಯಪ್ಪ ಸುಮಾರು 6 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ.

6. ಪೂಜಾರಿ ಕರಿಯಪ್ಪನಿಗೆ ಇಬ್ಬರು ಗಂಡು ಮಕ್ಕಳು ಹಾಗೂ ಮೂರು ಜನ ಹೆಣ್ಣು ಮಕ್ಕಳು ಇರುತ್ತಾರೆ. ಕಮಲಮ್ಮ ಚಿಕ್ಕಬೆನ್ನೂರಿನಲ್ಲಿ ವಾಸಿಸುತ್ತಿದ್ದರು ನಂತರ ಶಿವಮೊಗ್ಗದಲ್ಲಿ ವಾಸಿಸುತ್ತಿದ್ದರು. ಕಮಲಮ್ಮ ನ ಮದುವೆ ರಾಮಪ್ಪ ನ ಜೊತೆ ಯಾವಾಗ ಆಗಿರುತ್ತದೆ ಎಂದು ಗೊತ್ತಿಲ್ಲ. ರಾಮಪ್ಪ ರವರ ಬಗ್ಗೆ ನನಗೆ ಗೊತ್ತಿಲ್ಲ. ಕಮಲಮ್ಮ ನ ಮದುವೆ ರಾಮಪ್ಪನ ಜೊತೆ ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.ಕಮಲಮ್ಮ ಮತ್ತು ರಾಮಪ್ಪರವರಿಗೆ ವಾದಿ ಹುಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿ ತೀರಿಕೊಂಡಿರುತ್ತಾರೆ.

7. ದಾವಾಸ್ವತ್ತಿನ ದಾಖಲಾತಿಗಳನ್ನು ನೋಡಿರುವುದಿಲ್ಲ. ದಾವಾಸ್ವತ್ತುಗಳು ಪಿರ್ತಾಜಿತ ಸ್ವತ್ತುಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತುಗಳು 1 ಮತ್ತು 2 ನೇ ಪ್ರತಿವಾದಿಯ ತಂದೆ ಕರಿಯಪ್ಪರವರ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ. ದಾವಾಸ್ವತ್ತುಗಳು ಕರಿಯಪ್ಪ ಮತ್ತು ವೆಂಕಟಮ್ಮ ರವರಿಗೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ಕಮಲಮ್ಮರವರ ತಂದೆಗೆ ಯಾವವುದೇ ಆಸ್ತಿಗಳು ಇರಲಿಲ್ಲ ಎಂದರೆ ಸರಿಯಲ್ಲ. ವಾದಿ ನನಗೆ ಈ ದಾವೆಯಲ್ಲಿ ಸಾಕ್ಷಿ ನುಡಿಯಲು

ಕರೆದಿರುತ್ತಾರೆ. ಈ ದಾವೆ ಸಲ್ಲಿಸುವ ಮೊದಲೇ ವಾದಿ ನನಗೆ ಸಾಕ್ಷಿ ಹೇಳಲು ಕೇಳಿಕೊಂಡಿದ್ದರು. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರು ವಾದಿಯವರ ಮಾತನ್ನು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಹಾಗೂ ನನ್ನ ಮದ್ಯ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು:-6(ಎ)</u> ರಿಂದ <u>(ಡಿ)</u> ಪ್ರತಿವಾದಿಯ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ. ಇದೆ.

2 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಚಿತ್ರದುರ್ಗ